# ಹನ್ನೆರಡನೇಶತಮಾನದ ವಚನಕಾರರ ವಚನಗಳಲ್ಲಿ ಮಾತಿನ ಮಹತ್ವ

**ಡಾ. ಅರುಣಕುಮಾರಿ ಬಿ. ಎನ್.**

ಕನ್ನಡ ಸಹಾಯಕ ಪ್ರಾಧ್ಯಾಪಕರು

ಸರ್ಕಾರಿ ಪ್ರಥಮದರ್ಜೆ ಕಾಲೇಜು

ಗುಬ್ಬಿ (ಸ್ವಾಯತ್ತ).

Article Link: https://aksharasurya.com/2023/06/arunakumari-b-n/

ಕನ್ನಡ ಸಾಹಿತ್ಯ ಪ್ರಕಾರಗಳಿಗಿಂತ ಹೆಚ್ಚು ಮೌಲ್ಯಯುತ ಭಿನ್ನ ಮತ್ತು ಸರಳ ಅಭಿವ್ಯಕ್ತಿ ಪ್ರಕಾರ ವಚನ ಸಾಹಿತ್ಯ. ಸದಾ ಜೀವನ ಮೌಲ್ಯಪರತೆಯಿಂದ ಕೂಡಿದ ಗಟ್ಟಿ ತಾತ್ವಿಕ ನೆಲೆಯನ್ನು ಹೊಂದಿರುವಂಥದ್ದು. ಮನುಷ್ಯ ಇತರ ಜೀವಿಗಿಂತ ಶ್ರೇಷ್ಠನೆಂದು ಗುರುತಿಸಿಕೊಂಡದ್ದೆ ತಾನಾಡುವ ಮಾತಿನಿಂದ. 'ಮಾತು ಮಾತು ಮಥಿಸಿ ಬಂತು ನಾದದ ನವನೀತ' ಎಂಬ ಬೇಂದ್ರೆಯವರ ಮಾತುಗಳು ವಚನಕಾರರಲ್ಲೇ ಸಾಬೀತಗೊಂಡಿದ್ದವು. ಆದ್ದರಿಂದ ಜನಸಾಮಾನ್ಯರನ್ನು ಕೇಂದ್ರೀಕರಿಸಿ ಆಡು ಮಾತಿನಲ್ಲಿ ವಚನ ರಚನೆ ಮಾಡಿದರು. ಅವರ ನಂಬಿಕೆಯೇ ಮಾತುಗಳಾಗಿ, ಆ ಮಾತೇ ಆದರ್ಶಮಯ ಜೀವನಾನುಭವದ ಸಂಕೇತವಾಗಿ ಉಳಿದು 'ವಚನ' ಎಂದರ್ಥ ಪಡೆಯಿತು. ಪ್ರತಿಯೊಬ್ಬ ವಚನಕಾರರಲ್ಲೂ ಜೀವನಾನುಭವದ ಅಗಾಧತೆ ಗಟ್ಟಿ ನೆಲೆಯಲ್ಲಿ ಧ್ವನಿಸಿತ್ತು ಎಂಬುದು ಅವರ ವಚನಗಳ ಮೂಲಕ ತಿಳಿಯುತ್ತದೆ.

ಮಾತೆಂಬುದು ಜ್ಯೋತಿರ್ಲಿಂಗ, ಮಾತಿನಿಂ ನಗೆಯು, ದೇವನೊಬ್ಬ ನಾಮ ಹಲವು, ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು ಎಂಬ ಸಾಲುಗಳು ನಡೆ ಮತ್ತು ನುಡಿಯ ಮಾರ್ಗ ಅಂದರೆ ಮಾತೆಂಬುದು ಸಾಬೀತಾದ ಬಗೆಯನ್ನು ಇದು ತಿಳಿಸುತ್ತದೆ. ಮಾತಿನ ಮಹತ್ವವನ್ನು ಸೂಚಿಸಿರುವ ವಚನಗಳ ಗ್ರಹಿಕೆಯಲ್ಲಿ ಮಾತಿನಿಂದ ಒಬ್ಬ ವ್ಯಕ್ತಿಯಲ್ಲಿ ಸದಭಿರುಚಿಯ ಬದಲಾವಣೆಯನ್ನು ತರಲು ಸಾಧ್ಯವಿದೆ. ಮಾತಿನಿಂದ ವ್ಯಕ್ತಿ ವ್ಯಕ್ತಿಗಳ ನಡುವೆ ಸಾಮರಸ್ಯ ಸ್ವಸ್ಥ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಮುಂದುವರೆದು ಜೀವನ ಮೌಲ್ಯವನ್ನು ಪ್ರತಿಪಾದಿಸುವ ಸಮಾನತೆ ಸ್ವಾತಂತ್ರ್ಯ ಸಹಭಾಗಿತ್ವದ ಆಯಾಮಗಳನ್ನು ನಾವು ಅರ್ಥೈಸುವುದು ಮಾತಿನಿಂದಲೇ ಆಗಿದೆ. ಮಾನವೀಯ ನೆಲೆಯಲ್ಲಿ ಒದಗುವ ಎಲ್ಲಾ ಅನುಭವಗಳನ್ನು, ಜಂಜಾಟಗಳನ್ನೂ ಸಹ

ಮಾತಿನಿಂದಲೇ ಅಭಿವ್ಯಕ್ತಿಸುವ ಶಕ್ತಿ ಮಾನವನಿಗಿದೆ. ಆದರೆ ಇಂದಿನ ಶಿಕ್ಷಿತ ಸಮುದಾಯದಲ್ಲೇ ಮಾತಿನ ಮೌಲ್ಯವು ಕ್ಷೀಣಿಸಿ ಸಾಮರಸ್ಯಕ್ಕಿಂತ ಸಮರಕ್ಕೇ ಬೆಲೆ ಎಂಬಂತಾಗಿದೆ. ಕಾಲಾನಂತರದಲ್ಲಿ ಮನುಷ್ಯನ ಆಲೋಚನಾ ವಿಸ್ತಾರಕ್ಕಿಂತ ಆಯ್ಕೆಯ ವಿಸ್ತಾರವೇ ಅವನಾಡುವ ಮಾತಿನ ಮೌಲ್ಯಕ್ಕೆ ಅಡ್ಡಿಪಡಿಸುತ್ತಿರುವುದು ವಿಪರ್ಯಾಸದ ಸಂಗತಿ.

ಮಾನವ ಇತರ ಪ್ರಾಣಿಗಳಿಗಿಂತ ಭಿನ್ನ ಮತ್ತು ವಿಶಿಷ್ಟನಾದವನು. ತಾನು ಬೆಳೆದ ಪರಿಸರ, ಬೆಳವಣಿಗೆ, ಬದಲಾವಣೆ ಮತ್ತು ಹುಟ್ಟು ಸಾವುಗಳ ಬಗೆಗೆ ಆಲೋಚನಾ ಶಕ್ತಿ ಉಳ್ಳವನು. ಇದರ ಜೊತೆಗೆ ತಾನು ಬೆಳೆದು ಬಂದ ಪರಿಸರವನ್ನು ನಿಸರ್ಗವೆಂದು ಕರೆದು ತನ್ನ ಹತೋಟಿಯಲ್ಲಿಟ್ಟು ಕೊಳ್ಳಲು ಶಕ್ಯನೆಂದು ಭ್ರಮಿಸುತ್ತಾನೆ. ಅಂದರೆ ತನ್ನ ಸುತ್ತಲಿನ ವಿದ್ಯಮಾನಗಳ ಬಗ್ಗೆ ಆಲೋಚಿಸುವ ಪ್ರಮಾಣ ಬದ್ಧ ನಿರ್ಧಾರಕ್ಕೆ ಬರಲು ಸಮರ್ಥನೆಂದಾಗಿದೆ. ವೈಜ್ಞಾನಿಕ ದೃಷ್ಟಿಕೋನ ಬೆಳೆಯದಿದ್ದ ಕಾಲದಲ್ಲೂ ತನ್ನೆಲ್ಲ ಜಿಜ್ಞಾಸೆ, ದ್ವಂದ್ವ ಪ್ರಶ್ನೆಗಳಿಗೆ ಮತ್ತು ಅನುಮಾನಗಳಿಗೆ ತಾತ್ವಿಕ ಅನುಸಂಧಾನದ ಮೂಲಕ ಉತ್ತರ ಕಂಡುಕೊಂಡು ಅದಕ್ಕೆ ಅನುಗುಣವಾಗಿ ಬದುಕಿದರೆ ಅದೇ ಸಮೃದ್ಧ ಸಂಸ್ಕೃತಿ. ಈ ಬಗೆಯ ಮಾನವೀಯ ಆಲೋಚನೆ ಕನ್ನಡ ಚರಿತ್ರೆಯಲ್ಲಿ ಸವಿಸ್ತಾರವಾಗಿ ಕಂಡುಬರುವುದು ವಚನ ಸಾಹಿತ್ಯದಲ್ಲಿಯೇ. ವ್ಯಕ್ತಿ ತನ್ನ ಮಾತಿನಿಂದ ವಿಶ್ವದ ಗಮನವನ್ನು ಸೆಳೆಯುವ ಮಾರ್ಗವನ್ನು ವಚನಕಾರರು ತೋರಿಸಿಕೊಟ್ಟರು. ಸ್ವಂತಕ್ಕಿಂತ ಸಮುದಾಯದ ಜಾಗೃತಿ ವಚನಗಳಲ್ಲಡಗಿದೆ. ೧೨ನೇ ಶತಮಾನದಿಂದ ಹಿಡಿದು ಇಂದಿಗೂ ವಚನಗಳ ಪುನರಾವರ್ತನೆ, ಪ್ರಸ್ತುತತೆ ಮತ್ತು ಪ್ರಸ್ತಾಪ ಅದರ ಮಹತ್ವತೆಯ ಜಾಡನ್ನು ಮುಂಬರುವ ಪೀಳಿಗೆಗೆ ಸರಿದಾರಿ ಮಾರ್ಗ ಸೂಚಿಸುತ್ತದೆ. ಇದು ಬಹುಮುಖಿ ಹಿನ್ನೆಲೆಯಲ್ಲಿ ಶರಣರ ಅರಿವಿನ ಮಾತು, ವ್ಯಕ್ತಿಯನ್ನು ದೈವಿಕ ಮಟ್ಟಕ್ಕೆ ಏರಿಸುತ್ತದೆ. ಆದರೂ ವೈಚಾರಿಕ ಚಿಂತನೆಗಳ ಮೂಲಕ ಆಧ್ಯಾತ್ಮಿಕ ಅರಿವನ್ನು ತನ್ನ ಇರುವಿಕೆಯಲ್ಲಿಯೇ ಸಾಬೀತುಪಡಿಸಿದವರು ವಚನಕಾರರು.

"ಕರಿಯನಿತ್ತಡೆಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪರಾಜ್ಯವನಿತ್ತಡೆಒಲ್ಲೆ
ನಿಮ್ಮ ಶರಣರ ಸುಳ್ನುಡಿಯ
ಒಂದರೆಗಳಿಗೆ ಇತ್ತಡೆ ನಿಮ್ಮನಿತ್ತೆ
ಕಾಣಾರಾಮನಾಥ"

ಆದ್ಯ ವಚನಕಾರನಾದ ಜೇಡರ ದಾಸಿಮಯ್ಯನು ಮನುಷ್ಯನಿಗೆ ಹಣ ಶ್ರೀಮಂತಿಕೆ ಮುಖ್ಯವಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಆಡುವ ಮಾತು ನಮ್ಮ ವ್ಯಕ್ತಿತ್ವವನ್ನು ನಿರ್ಧರಿಸುವುದು ಮಾತ್ರವಲ್ಲದೆ ರೂಪಿಸುತ್ತದೆ ಎಂಬುದಕ್ಕೆ ವಚನಕಾರರ ಈ ಮಾತೆ ಸಾಕ್ಷಿ. ಇಲ್ಲಿ ಕುಲ, ಮತ, ಅಂತಸ್ತಿನ ಬಳಕೆಗಿಂತ ಆಲೋಚನೆಯ ಬೆಳಕಿನ ಕಡೆಗೆ ತಮ್ಮ ಸಾಧನೆಯನ್ನು ಅರಸಿ ಬಂದವೇ ಹೆಚ್ಚು. ವೈಯಕ್ತಿಕ ಚಿಂತನೆಯು ಕಳೆದು ಸಾಮೂಹಿಕ ಜನಪರ ಹಿತಾಸಕ್ತಿ ಇವರ ವಚನಗಳಲ್ಲಡಗಿವೆ. ಅಂದರೆ ವಚನ ಸಾಹಿತ್ಯದ ಸಂಸ್ಕೃತಿ, ಚಿಂತನೆಯ ವೈಶಿಷ್ಟ್ಯವಿರುವುದು ಅವುಗಳು ಬಯಸುವ ವಿಶ್ವಶಾಂತಿಯಿಂದಾಗಿದೆ. ಈ ಶಾಂತಿಯು ಪ್ರತಿಯೊಬ್ಬನೂ ತನ್ನ ಕಾಯಕದ ಮೂಲಕ, ಆಲೋಚನೆಯ ಮೂಲಕ, ನಡೆ ನುಡಿಗಳೊಂದಾಗುವ ಮೂಲಕ ದೈವೀಗುಣವನ್ನು ಸಾಧಿಸಬಹುದು ಎಂಬುದಕ್ಕೆ ವಚನಕಾರರ ವಚನಗಳೇ ಸಾಕ್ಷಿ.

“ನಾ ದೇವನಲ್ಲದೆ ನೀ ದೇವನೇ
ನೀ ದೇವನಾದರೆ ಎನ್ನನೇಕೆ ಸಲಹೆ
ಆರೈದು ಒಂದುಕುಡಿತೆ ಉದಕವ ನೆರವೇ
ಹಸಿದಾಗ ಒಂದುತುತ್ತು ಓಗರವನಿಕ್ಕುವೆ
ನಾ ದೇವಾಕಾಣ ಗುಹೇಶ್ವರ”

ಮಾನವ ಜೀವನವೇ ಸರಿ–ತಪ್ಪುಗಳ ಪ್ರಯೋಗ ಸ್ವಹಿತಾಶಕ್ತಿಗಳಿಗೆ ಅನುಗುಣವಾಗಿ ಮಾರ್ಪಾಡಾಗುತ್ತಿರುತ್ತದೆ. ಅವುಗಳನ್ನು ಮೀರಿ ಅಭಿವೃದ್ಧಿಗೆ ಸಿದ್ಧತೆ ನಡೆಸಿ ಬೆಳೆಯುವುದು ಅನಿವಾರ್ಯವಾಗಿದೆ. ಅಲ್ಪತೆಯನ್ನು ಮೀರಿಹೃದಯ ವೈಶಾಲ್ಯತೆಯನ್ನು ರೂಪಿಸಿಕೊಳ್ಳುವುದು ನಾಗರೀಕತೆಯ ಲಕ್ಷಣ. ಸೃಷ್ಟಿಯಲ್ಲಿ ರೂಪಿತಗೊಂಡ ಮಾನವ, ಸಮಾಜದಲ್ಲಿನ ಒಡನಾಟದಿಂದ ಮನುಷ್ಯನಾಗುತ್ತಾನೆ. ತನಗಾದ ಅನುಭವಗಳಿಂದ ಮಾನವ ಸಮುದಾಯವು ಸರಿಯಾದ ಜೀವನಕ್ರಮ ಹಾಗೂ ಆಲೋಚನೆಗಳನ್ನು ಮಾಡಿ ನಿಜ ಸಂಸ್ಕೃತಿಯ ರೂವಾರಿಗಳಾದರು. ಕ್ರಿಯೆ ಸಾಧನೆಗೆ ದಾರಿ ಎಂಬಂತೆ ವಿಶ್ವಾಸದಿಂದ ಪ್ರಾಮಾಣಿಕತೆಯು ಜೀವನ ಮೌಲ್ಯವಾಗಿ ಸಮುದಾಯದ ಹಿತದೃಷ್ಟಿ ಬಯಸಿದರೆ ಆಧ್ಯಾತ್ಮ ಸಿದ್ಧಿಸುತ್ತದೆ. ಅದೇ ದೈವೀನೆಲೆಯ ಪಾರಮ್ಯ ಎಂಬುದು ಎಲ್ಲ ವಚನಕಾರರ ನಿಲುವು. ಇದಕ್ಕೆ ಪ್ರತಿರೂಪವೆಂಬಂತೆ ಅಲ್ಲಮಪ್ರಭುವಿನ ವಚನಗಳಿವೆ.

ಹಸಿದವನಿಗೆ ಉಣಲಿಕ್ಕಿದಾತನೇ ದೇವರಿಗೆ ಸಮಾನ. ಅನ್ನದಾತಾ ಸುಖೀಭವ ಎಂಬ ಮಾತು ಸಾಮಾಜಿಕ ಸಾಮರಸ್ಯದ ಪ್ರತೀಕ. ಮನುಷ್ಯನ ಮಾನಸಿಕ ಬೆಳವಣಿಗೆ ಹಾಗೂ ಕ್ರಿಯಾಶೀಲತೆಯ ಆಧಾರವೇ ಜೀವನ ಮೌಲ್ಯ. ಇದು ರೂಪಿತಗೊಳ್ಳುವುದು ಆಡಂಬರದ ಆಚರಣೆಯಿಂದಲ್ಲ. ವಿಜೃಂಭಣೆಯ ಅನುಸರಣೆಯಿಂದಲೂ ಅಲ್ಲ. ನಡೆ–ನುಡಿ ಒಂದಾಗುವುದು ಆಲೋಚನೆಯಿಂದ ಇದೇ ವಚನ ಇದೇ ದೈವಿಕತೆ ಎಂಬುದನ್ನು ವಚನಗಳು ಪುಷ್ಟೀಕರಿಸುತ್ತವೆ.

ವಚನಕಾರರು ವಚನಗಳ ಮೂಲಕ ಆಧ್ಯಾತ್ಮದ ವಿನ್ಯಾಸವನ್ನು ಆಶ್ರಯಿಸಿದ್ದರೂ, ನಿತ್ಯಜೀವನಾನುಭವದ ಮೂಲಕ ಆಧ್ಯಾತ್ಮದ ಪರಿಕಲ್ಪನೆಗೆ ತೆರೆದು ಕೊಂಡವರು. ಸೂಕ್ಷ್ಮಗ್ರಾಹಿಗಳಾದ ವಚನಕಾರರು ದೇವರ ಪರಿಕಲ್ಪನೆಯನ್ನು ಅವತಾರದ ರೂಪದಲ್ಲೋ ಅಥವಾ ಪವಾಡದ ರೂಪದಲ್ಲೋ ಕಲ್ಪಿಸಿಕೊಳ್ಳದೆ ಕಾಯಕದ ಮೂಲಕವೇ ಆತ್ಮತೃಪ್ತಿಕಂಡುಕೊಂಡ ಬಗೆ ವಿಶಿಷ್ಟವಾದುದು. ಸದಾ ವಿಮರ್ಶಕ ಗ್ರಹಿಕೆಯಿಂದ ಇವರ ವಿಚಾರ ಧಾರೆಗಳು ಮುಂದಿನ ಪೀಳಿಗೆಗೆ ಬೆಳಕು ನೀಡುವ ದರ್ಪಣದಂತಿವೆ. ಇವರ ವಚನಗಳು ನೀತಿ ಬೋಧನೆಗಳ ತುಣುಕುಗಳಾಗದೆ ಅಸಮಾನತೆಯ ವಿರುದ್ಧ ಪ್ರತಿಯೊಬ್ಬನೂ ಹೋರಾಡಬೇಕೆಂಬ ಕಿಡಿಗಳಂತಿವೆ.

"ಉಳ್ಳವರು ಶಿವಾಲಯವ ಮಾಡಿಹರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಬ ದೇಹವೇದೇಗುಲ
ಶಿರವೆ ಹೊನ್ನ ಕಳಶವಯ್ಯಾ
ಕೂಡಲಸಂಗಮ ದೇವಾ ಕೇಳಯ್ಯ
ಸ್ಥಾವರಕಳಿವುಂಟು ಜಂಗಮಕ್ಕಳಿವಿಲ್ಲ"

ಬಸವಣ್ಣನವರ ವಚನಗಳಲ್ಲಿ ಈ ವಚನದ ಪ್ರಸ್ತುತತೆ ಹೆಚ್ಚಿನದು. ಮೇಲ್ನೋಟಕ್ಕೆ ಭಕ್ತ ಮತ್ತು ಭಕ್ತಿಯ ಪರಾಕಾಷ್ಠೆಯ ಪಾರಮ್ಯ ಅಡಗಿರುವಂತೆ ಕಂಡುಬರುತ್ತದೆ. ದೈವತ್ವ ಕಲ್ಪನೆ ಸಾಧನ ಮಾರ್ಗವಾಗಿ ಬಳಸಿಕೊಳ್ಳುವ ಹಂಬಲ ಭಕ್ತನದು. ಆದರೆ ಬಡತನ ಆತನಿಗೆ ಅಡ್ಡಿಪಡಿಸಿದಂತೆ ಈ ವಚನದ ಭಾವಾರ್ಥವಿದೆ. ಅಂದರೆ ತನ್ನನ್ನು ತಾನು ಒಳಗೊಳ್ಳುವಿಕೆಯ ಮಾರ್ಗ. ಭಕ್ತನಾದವನು ಭಕ್ತಿಯ ಮೂಲಕ ನಿವೇದಿಸುವ ಪರಿ ಇಹ ಮತ್ತು ಪರ, ಲೌಕಿಕ ಮತ್ತು ಆಧ್ಯಾತ್ಮಿಕತೆಗಳ ಸಂಕೇತವೂ ಹೌದು. ಒಟ್ಟಾರೆ ಈ ವಚನದಲ್ಲಿ ಸ್ವಂತಿಕೆಯ

ಅರಿವನ್ನು ಮೂಡಿಸುತ್ತಲೇ ಸಮಾಜದಲ್ಲಿನ ಕಷ್ಟಕಾರ್ಪಣ್ಯ ಮತ್ತು ಬಡತನ ಶ್ರೀಮಂತಿಕೆಯ ನಡುವಿನ ಸಂಬಂಧ ಸೂಕ್ಷ್ಮವಾಗಿ ತಿಳಿಸುತ್ತದೆ. ಇಲ್ಲಿ ಲಯಕ್ಕಿಂತ ಸ್ಥಿತಿಯ ಮೇಲಿನ ಜೀವನಾನುಭವ ಸ್ಥಾವರ ಮತ್ತು ಜಂಗಮದ ಪರಿಕಲ್ಪನೆ, ಪ್ರಸಾರ ಮತ್ತು ಪ್ರಚಾರ ಮಾಧ್ಯಮಗಳು ಮಾತಿನ ಮೂಲಕವೇ ನೆಲೆನಿಂತಿವೆ ಮತ್ತು ತನ್ನನ್ನು ತಾನು ಅರಿಯುವುದೇ ದೈವ ಎಂಬ ಮಾತನ್ನು ಸದಾ ಸ್ಪಷ್ಟೀಕರಿಸುತ್ತವೆ.

"ಅರ್ಥದ ಮದ, ಅಧಿಕಾರದ ಮದ, ಕುಲದ ಮದಬಿಡದೆ
ಸಮಯಾಚಾರ ಸಮಯ ಭಕ್ತಿಇನ್ನಾರಿಗೆಯೂ
ಅಳವಡದು ನೋಡಾ
ಮಾತಿನ ಮಾತಿನ ಮಿಂಚಿನ ಢಾಳಕರಿಗೆ
ಸಮಯ ಭಕ್ತಿ ಇನ್ನೆಲ್ಲಿಯದೋ ಕೂಡಲ ಚೆನ್ನಸಂಗಯ್ಯ?"

ಅಹಂಕಾರವೆಂಬುದು ಅಧಿಕಾರದಲ್ಲಿ, ವ್ಯಾಮೋಹದಲ್ಲಿ, ಆಸ್ತಿ, ಸೌಂದರ್ಯದಲ್ಲಿ, ಕುಲದಲ್ಲಿ ಹೀಗೆ ಮುಂತಾದ ಕಾರಣಗಳಿಂದ ಬರುತ್ತದೆ. ಚನ್ನಬಸವಣ್ಣ ಹೇಳುವಂತೆ ಹಣದ ಮದ, ಅಧಿಕಾರದ ಮದ, ಕುಲದ ಮದ ಇವುಗಳನ್ನು ಬಿಡದ ಹೊರತು ಎಂದೂ ಮನುಷ್ಯನಿಗೆ ಶ್ರದ್ಧಾನಿಷ್ಠೆಯ ಶುದ್ಧ ಆಚಾರ ಶುದ್ಧಭಕ್ತಿ ಸಾಧ್ಯವಿಲ್ಲ ಎನ್ನುತ್ತಾನೆ. ಮುಂದುವರೆದು ಕೇವಲ ಮಾತು ಮಾತುಗಳಿಂದ ಮಿಂಚುವ ವಂಚಕರಿಗೆಶ್ರದ್ಧಾ, ನಿಷ್ಠೆ ಮತ್ತು ಭಕ್ತಿ ಹೇಗೆ ಸಾಧ್ಯ? ಎಂದು ಪ್ರಶ್ನಿಸುತ್ತಾನೆ. ಈ ಪ್ರಶ್ನೆ ಕೇವಲ ಪರಾಗತವಲ್ಲ, ಸ್ವಗತವೂ ಹೌದು. ಮದವೆಂಬುದು ಮನುಷ್ಯನಿಗೆ ಆವರಿಸಿದರೇ ಸದಾ ಭಯದ ಬದುಕು ಅವನಿಗೆ ಸಿದ್ಧ. ಅವುಗಳ ರಕ್ಷಣೆಯಲ್ಲಿಯೇ ಚಿಂತಿಸುವ ಅವನು ಪರಾವಲಂಬಿಯಾಗಿ ಬದುಕು ನಡೆಸುತ್ತಾನೆ. ಆದ್ದರಿಂದ ತನ್ನ ತನವನ್ನು ಕಳೆದುಕೊಳ್ಳುವವನಿಗೆ ಭಕ್ತಿ ಎಲ್ಲಿ ಸಿದ್ಧಿಸೀತು! ಎಂದು ಢಾಂಬಿಕ ಭಕ್ತಿಯನ್ನು ಹೀಗಳೀಯುತ್ತಾನೆ. ಮುಂದುವರೆದು,

"ನಿಷ್ಠೆಯುಳ್ಳಾತಂಗೆ ನಿತ್ಯ ನೇಮದ ಹಂಗೇಕೆ?
ಸತ್ಯವುಳ್ಳಾತಂಗೆ ತತ್ವ ವಿಚಾರದ ಹಂಗೇಕೆ?
ಅರಿವುಳ್ಳಾತಂಗೆ ಅಗ್ಗವಣಿಯ ಹಂಗೇಕೆ?
ಮನಶುದ್ಧಿಯುಳ್ಳವಂಗೆ ಮಂತ್ರದ ಹಂಗೇಕೆ?
ಭಾವಶುದ್ದಿಯುಳ್ಳವಂಗೆ ಹೂವಿನ ಹಂಗೇಕೆ?
ಕೂಡಲ ಚನ್ನಸಂಗಯ್ಯ ನಿಮ್ಮ ನಂಬಿದಾತಂಗೆ ನಿಮ್ಮ ಹಂಗೇಕೆ?"

"ಅರಿತುಕೊಂಡಾದ ಮೇಲೆ ಬೆರೆಯುವುದೇ ಹೊರತು ಆಚರಿಸುವುದಲ್ಲ" ಎಂಬ ಮಾತನ್ನು ಈ ವಚನ ಸಾದರಪಡಿಸುತ್ತದೆ. ಲಿಂಗ ನಿಷ್ಠೆ ಇದ್ದವನಿಗೆ ನಿತ್ಯ

ನೇಮದ ಹಂಗಾಗಲಿ, ಸತ್ಯವಂತನಿಗೆ ತತ್ವ ವಿಚಾರದ ಹಂಗಾಗಲಿ, ಅರ್ಥ ಮಾಡಿಕೊಂಡವನಿಗೆ ತೀರ್ಥದ ಹಂಗಾಗಲಿ ಬೇಕಿಲ್ಲ. 'ಭಕ್ತಿಗೆ ಸಾಧನೆ ಮುಖ್ಯ ಹೊರತು ಭಕ್ತನಿಗೆ ಸಾಧನ ಸಲಕರಣೆಗಳಲ್ಲ' ಎಂಬ ಮಾತನ್ನು ವಚನ ಪ್ರತಿನಿಧಿಸುತ್ತದೆ. ಇಲ್ಲಿ ಮಧ್ಯವರ್ತಿಯ ಅವಶ್ಯಕತೆಯೇ ಬೇಡದೃಢ ಭಕ್ತನಿಗೆ ತನ್ನ ಅಚಲ ಶ್ರದ್ಧೆಯೇ ಸಾಧನೆಯ ಮಾರ್ಗ ಎಂಬುದನ್ನು ದೃಢತೆಯಿಂದ ಈ ವಚನ ಸ್ಪಷ್ಟಪಡಿಸುತ್ತದೆ.

ಒಟ್ಟಾರೆಯಾಗಿ ಮನುಷ್ಯ ಚೈತನ್ಯವು ಸದಾ ಹಂಬಲಿಸುವ ಸೃಷ್ಟಿ ಮೂಲದ್ದು ಮಾತು. ಎಲ್ಲ ವಲಯಗಳನ್ನು ತನ್ನತ್ತ ಕೇಂದ್ರೀಕರಿಸಿಕೊಳ್ಳುವ, ಆ ಮೂಲಕ ಚಿಂತನೆ ನಡೆಸುವ, ಚರ್ಚೆಗೆ ಗ್ರಾಸವಾಗುವ ಮಾಧ್ಯಮ ಮಾತು. ಇದನ್ನೇ ೧೨ನೇ ಶತಮಾನದ ವೈಚಾರಿಕ ಪ್ರಜ್ಞೆಯ ಚಿಂತನಕಾರರಾದ ವಚನಕಾರರು ವಚನ ಎಂಬ ಪದ ಪ್ರಯೋಗ ಮಾಡಿದರು. ಹಲವಾರು ವಚನಕಾರರು ವಚನಗಳಲ್ಲಿ ಮಾತಿನ ಮಹತ್ವವನ್ನು ಹೇಳುತ್ತಲೇ ಆ ಮಾತು ಬರಿ ಆಡು ನುಡಿಯಾಗದೆ ಪ್ರಮಾಣವೆಂಬ ಶ್ರೇಷ್ಠತೆ ಪಡೆಯಿತು. ವಚನವು ಸಮಾಜಮುಖಿ ಚಿಂತನೆಯನ್ನು ಒಳಗೊಂಡಿದೆ. ಆಧ್ಯಾತ್ಮದ ಪರಿಕಲ್ಪನೆ ಅರಿವಿನ ಅರಹನ್ನು ವಿಸ್ತಾರಗೊಳಿಸುವ ಮಾಧ್ಯಮವಾಗಿಯೂ ವಚನಕಾರರಲ್ಲಿ ವ್ಯಕ್ತಗೊಂಡಿದೆ. ಆದರೆ ಇಂದಿನ ವಿದ್ಯಮಾನಗಳು ಬೆಳಕಿನಲ್ಲೂ ಕತ್ತಲೆಯನ್ನು ಅರಸುವಂತೆ ಮಾಡುತ್ತಿವೆ. ವಿಜ್ಞಾನದ ಜೊತೆ ಜ್ಯೋತಿಷ್ಯ, ಸತ್ಯ ಶೋಧನೆಯ ಕಡೆ ಪವಾಡ, ಮಾಟ ಮಂತ್ರಗಳ ಕಲ್ಪನೆ, ಕಾಯಕವೇ ಕೈಲಾಸ ಎಂದ ಬಸವಣ್ಣನವರ ನುಡಿಗಳು ಕಾಯವೇ ಕೈಲಾಸವೆಂದ ದೇವರ ದಾಸಿಮಯ್ಯನ ನುಡಿಗಳು ಕೇವಲ ಮಾತುಗಳಿಗೆ ಸೀಮಿತವಾಗದೆ ತನು ಶುದ್ಧಿ, ಮನ ಶುದ್ಧಿ ಮೂಲಕ ಪರಮಾತ್ಮನೆಡೆಗೆ ನಡೆಯುವುದು ಎಂದರ್ಥ. ಕೈಲಾಸ ಎಂದರೆ ಆತ್ಮ ತೃಪ್ತಿಯೇ ಹೊರತು, ಯಾತ್ರೆಯಲ್ಲ –ಆಡಂಬರವೂ ಅಲ್ಲ ಎಂಬುದನ್ನು ಎಲ್ಲ ವಚನಕಾರರ ಸಮೂಹ ೧೨ನೇ ಶತಮಾನದಲ್ಲಿಯೇ ರುಜುವಾತು ಪಡಿಸಿದ್ದಾರೆ. ಆದ್ದರಿಂದ ಮಾತು ಕೇವಲ ನುಡಿಯಾಗದೆ ಪ್ರಮಾಣಬದ್ಧ ನಡೆಯಾಗಬೇಕೆಂಬುದನ್ನು ವಚನಕಾರರ ಜೀವಪರ ಕಾಳಜಿಯ ವಚನಗಳು ಸಾಕ್ಷಿಯನ್ನೊದಗಿಸುತ್ತವೆ.

**ಆಕರ ಗ್ರಂಥಗಳು:**


1. ಬಸವಣ್ಣನವರ ವಚನಗಳು, ಡಾ. ಎಲ್. ಬಸವರಾಜು (ಸಂ), ಗೀತಾ ಬುಕ್ ಹೌಸ್.
2. ವಚನ ಕಮ್ಮಟ, ಡಾ. ಕೆ. ಮರುಳಸಿದ್ದಪ್ಪ & ಕೀರಂ ನಾಗರಾಜು (ಸಂ), ಸ್ವಪ್ನ ಬುಕ್ ಹೌಸ್, ಬೆಂಗಳೂರು.
3. ಆಯ್ದ ವಚನಗಳು, ರಾಧಾಕೃಷ್ಣ ಕೆ. ವಿ. (ಸಂ), ಅಂಬಾ ಪ್ರಕಾಶನ, ಬೆಂಗಳೂರು.